# ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ

OS 51/2021

| | | |
|---|---|---|
| ಸಾಕ್ಷಿಯ ಹೆಸರುಃ | ಪಿ.ಎನ್.ವಿಜಯೇಂದ್ರ | PW-4 |
| ತಂದೆ ಹೆಸರುಃ | ಹೆಚ್.ಜಿ.ನಾರಾಯಣಮೂರ್ತಿ | |
| ವಯಸ್ಸುಃ | 70 ವರ್ಷ | ಪ್ರಮಾಣೀಕರಿಸಿದ ದಿಃ 18.11.2025. |
| ಉದ್ಯೋಗಃ | ಪತ್ರ ಬರಹಗಾರರು | |
| ವಾಸಸ್ಥಳಃ | ಕುಶಾಲನಗರ | |

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ.

1. ನಿಪಿ -1 ರನ್ನು ವಾದಿಗೆ ಹರಿಶ ರವರಿಗೆ ಪ್ರತಿವಾದಿ ಮಹಾಲಿಂಗಪ್ಪ ನವರು ಬರೆದುಕೊಟ್ಟ ಕ್ರಯ ಒಪ್ಪಂದ ಪತ್ರ. ಸದರಿ ನಿಪಿ - 1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅವರ ಸಹಿಯನ್ನು **ನಿಪಿ - 1(ಡಿ)** ಎಂದು ಗುರುತಿಸಲಾಯಿತು.
2. ಸಾಕ್ಷಿ ನಿಪಿ-1 ರಲ್ಲಿನ ವಾದಿ ಮತ್ತು ಪ್ರತಿವಾದಿಯ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-1(ಎ) ಮತ್ತು (ಸಿ) ಎಂದು ಗುರುತಿಸಲಾಗಿದೆ.
3. ನಿಪಿ - 1 ಕ್ಕೆ ಸಾಕ್ಷಿಗಳಾಗಿ ಲಕ್ಷ್ಮೀನಾರಾಯಣ ಹಾಗೂ ಸುರೇಶ ರವರು ಸಹಿ ಮಾಡಿದ್ದಾರೆ. ಸಾಕ್ಷಿ ಸದರಿಯವರ ಸಹಿಗಳನ್ನು ನೋಡಿ ಗುರುತಿಸಿದ್ದು, ಲಕ್ಷ್ಮೀನಾರಾಯಣ ರವರ ಸಹಿಯನ್ನು ಈಗಾಗಲೇ ನಿಪಿ - 1(ಬಿ) ಎಂದು ಗುರುತಿಸಲಾಗಿದೆ.
4. ಸಾಕ್ಷಿ ನಿಪಿ - 13 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ - 13(ಡಿ)** ಎಂದು ಗುರುತಿಸಲಾಯಿತು.
5. ನಿಪಿ - 13 ಕ್ಕೆ ಪ್ರತಿವಾದಿಯು ವಾದಿಗೆ ಬರೆದುಕೊಟ್ಟಿರುತ್ತಾರೆ. ಸಾಕ್ಷಿ ನಿಪಿ -13 ರಲ್ಲಿನ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಈಗಾಗಲೇ ನಿಪಿ (ಬಿ) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ